ಶ್ರೀ ಎಂ. ಮಹದೇವ್ : ಈಗ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದರ ಮೇಲೆ ನಾವು ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮತ್ತೆ ಹಾರಿಕೆ ಉತ್ತರ ಕೊಡುತ್ತಿದ್ದಾರೆ. ಇದಕ್ಕೆ ನಾವೇನು ಮಾಡಬೇಕೆಂದು ತಾವೇ ಹೇಳಬೇಕು. ನಾನು ಕೇಳಿರತಕ್ಕಂಥ ಪ್ರಶ್ನೆಗೆ ಎಲ್ಲಾ ಕಡೆ ಹುದ್ದೆಗಳು ಖಾಲಿ ಇವೆ ಎಂದು ಉತ್ತರ ಕೊಟ್ಟಿದ್ದಾರೆ. ಈ ರೀತಿಯಾದರೆ ನಾವೇನು ಮಾಡಬೇಕು?

Mr. Speaker : I cannot compel the Minister to answer like this or that.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಾವು ಛೇಮಾರಿ ಹಾಕಬೇಕಾಗುತ್ತದೆ.

ಅಧ್ಯಕ್ಷರು : ನಾನು ಕಂಪೆಲ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಈ ಸರ್ಕಾರಕ್ಕೆ ನೀವು ಬೈಯ್ಯದೆ ಇದ್ದರೆ ಏನೂ ಕೆಲಸವಾಗುವುದಿಲ್ಲ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈಗ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅವರ ಕಷ್ಟವನ್ನು ಸರ್ಕಾರದ ಮುಂದೆ ಹೇಳಿದ್ದಾರೆ. ಆದ್ದರಿಂದ, ಇದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕಾಗಿದೆಯೋ ಅದನ್ನು ಮುಂದಿನ ಅಧಿವೇಶನ ಸೇರುವುದರೊಳಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಹೇಳತಕ್ಕಂಥದ್ದನ್ನು ದಯವಿಟ್ಟು ಕೇಳಬೇಕು. ಇವತ್ತಿನದಿವಸ ಒಂದೊಂದು ತಾಲ್ಲೂಕಿನಲ್ಲಿ ಎಲ್ಲಾ ಪೋಸ್ಟ್‌ಗಳನ್ನು ತುಂಬಿದ್ದಾರೆ. ಆದರೆ, ಒಂದೊಂದು ತಾಲ್ಲೂಕಿನಲ್ಲಿ ಪೂರ್ತಿ ಖಾಲಿ ಇವೆ. ಕೊನೇ ಪಕ್ಷ ಇರತಕ್ಕಂಥವರಲ್ಲಿಯೇ ಅಡ್ಜಸ್ಟ್ ಮಾಡಿ. ತಕ್ಷಣವೇ ಎಲ್ಲವನ್ನೂ ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ನಾವೂ ಕೂಡ ಒಪ್ಪಿಕೊಳ್ಳುತ್ತೇವೆ. ಎಲ್ಲಿ ಎಲ್ಲಾ ಹುದ್ದೆಗಳು ಖಾಲಿ ಇರುತ್ತವೆಯೋ ಅಂಥ ಕಡೆಯಾದರೂ ಇರತಕ್ಕಂಥವರನ್ನೇ ಅಡ್ಜಸ್ಟ್ ಮಾಡಿ ಅಲ್ಲಿಗೆ ಕಳುಹಿಸುವಂಥ ಕೆಲಸ ಮಾಡಬೇಕು. ಕನಿಷ್ಟಪಕ್ಷ ಒಬ್ಬ ಸಹಾಯಕ ನಿರ್ದೇಶಕರಾದರು ಇರಬೇಕಲ್ಲವೆ? ನಮ್ಮಲ್ಲಿರತಕ್ಕಂಥ ಒಂದೇ ಒಂದು ಪೋಸ್ಟ್‌ನ್ನು ಕಳೆದ ನಾಲ್ಕು ವರ್ಷಗಳಿಂದ ಯಾರನ್ನು ತುಂಬದೇ ಖಾಲಿ ಇಟ್ಟಿದ್ದೀರಿ. ನಾನು ಆಗಿನಿಂದಲೂ ಈ ಪ್ರಶ್ನೆಯನ್ನು ಕೇಳುತ್ತಾ ಬರುತ್ತಿದ್ದೇನೆ. ಆದರೆ, ಈ ಪ್ರಶ್ನೆ ಯಾವಾಗಲೂ ಕೂಡ ಅನ್ ಸ್ಟಾರ್ಡ್ ಆಗಿ ಬರುತ್ತಿತ್ತು. ಆದರೆ, ಸುದೈವದಿಂದ ಈ ಸಾರಿ ಸ್ಟಾರ್ಡ್ ಪ್ರಶ್ನೆಯಾಗಿದೆ. ನನ್ನೆದಿವಸ ಬೇಡಿಕೆಯ ಮೇಲೆ ಮಾತನಾಡುವಾಗ ಇವರ ಇಲಾಖೆಯ ಬಗ್ಗೆ ಮಾತನಾಡಬೇಕೆಂದು ನಾನು ಎಲ್ಲವನ್ನೂ ತಯಾರು ಮಾಡಿಕೊಂಡಿದ್ದೆ. ಆದರೆ ನನಗೆ ಹೆಚ್ಚಿನ ಸಮಯ ಸಿಗಲಿಲ್ಲ. ಆದರೂ ಕೂಡ ಇವರ ಇಲಾಖೆಯ ಮೇಲೆ ತರಾಟೆಗೆ ತೆಗೆದುಕೊಂಡಿದ್ದೆ. ಇವರು ಕೇವಲ 5 ಅಥವಾ 10 ಪೈಸೆ ಕೊಡುತ್ತಿದ್ದಾರೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಭರ್ತಿ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ. ಆದರೂ ಕೂಡ ಮಾನ್ಯ ಸದಸ್ಯರು ಮತ್ತೆ ಮತ್ತೆ ಕೇಳುತ್ತಿದ್ದಾರೆ.

ಸರ್ಕಾರ ಬಂಡವಾಳ ಹೂಡಿದ ಕಾರ್ಖಾನೆಗಳು

393 (3469) : ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಎಷ್ಟು ಕಾರ್ಖಾನೆಗಳಿಗೆ ಬಂಡವಾಳವನ್ನು ಹೂಡಿದೆ;

ಆ) ಬಂಡವಾಳ ಹೂಡಿದ ಕಾರ್ಖಾನೆಗಳ ವಿವರವನ್ನು ತಿಳಿಸುವುದು;

ಇ) ನಷ್ಟ ಹೊಂದಿದ ಕಾರ್ಖಾನೆಗಳಿಗೆ ಪುನಶ್ಚೇತನಕ್ಕಾಗಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ರಾಜ್ಯ ಸರ್ಕಾರವು 29 ಕಾರ್ಖಾನೆಗಳಿಗೆ ಬಂಡವಾಳವನ್ನು ಹೂಡಿರುತ್ತದೆ.

ಆ) ಬಂಡವಾಳ ಹೂಡಿದ ಕಾರ್ಖಾನೆಗಳ ವಿವರ ಈ ಕೆಳಗಿನಂತಿದೆ:

1. ಮೈಸೂರು ಸಕ್ಕರೆ ಕಾರ್ಖಾನೆ ನಿ.,
2. ಮೈಸೂರು ಕಾಗದ ಕಾರ್ಖಾನೆ ನಿ.,
3. ಮೈಸೂರು ದೀಪದ ಕಾರ್ಖಾನೆ ನಿ.,
4. ಮೈಸೂರು ಬಣ್ಣ ಮತ್ತು ಅರಗು ನಿ.,
5. ಮೈಸೂರು ಮ್ಯಾಚ್ ಕಂಪನಿ ನಿ.,
6. ಮೈಸೂರು ಕ್ರೋಮ್ ಟ್ಯಾನಿಂಗ್ ಕಂ.ನಿ.
7. ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತ
8. ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ನಿ.,
9. ಎನ್.ಜಿ.ಇ.ಎಫ್. ನಿಯಮಿತ
10. ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ನಿಯಮಿತ,
11. ಮೈಸೂರು ಮಿನರಲ್ಸ್ ನಿಯಮಿತ.
12. ಮೈಸೂರು ಕಾಸ್ಮೆಟಿಕ್ಸ್ ನಿ.,
13. ಚಾಮುಂಡಿ ಮಿಷನ್ ಟೂಲ್ಸ್ ನಿ.,
14. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿ.,
15. ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಷನ್ ನಿ.,
16. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ,
17. ಕರ್ನಾಟಕ ಸ್ಟೇಟ್ ಟೆಕ್ಸ್ ಟೈಲ್ಸ್ ನಿ.,
18. ಕರ್ನಾಟಕ ಟೆಲಿಕಾಂ ನಿ.,
19. ಕರ್ನಾಟಕ ಟಂಗಸ್ಟನ್ ಮೋಲಿ ನಿ.,
20. ಎನ್.ಜಿ.ಇ.ಎಫ್. (ಹುಬ್ಬಳ್ಳಿ) ನಿ.,
21. ಕರ್ನಾಟಕ ಸ್ಟೇಟ್ ಪವರ್ ಲೂಮ್ ಡೆವಲಪ್ ಮೆಂಟ್ ಕಾರ್ಪೋರೇಷನ್
22. ವಿಜಯನಗರ ಸ್ಟೀಲ್ ಲಿ.,
23. ಮೈಸೂರು ತಂಬಾಕು ಕಂಪನಿ ನಿ.,
24. ಕರ್ನಾಟಕ ಸ್ಟೇಟ್ ಆಗ್ರೋ ಕಾರ್ನಪೊಡಕ್ಟ ನಿ.,
25. ಕರ್ನಾಟಕ ಸ್ಟೇಟ್ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೋರೇಷನ್ ನಿ.,

26. ಕರ್ನಾಟಕ ಸ್ಟೇಟ್ ವಿನೀರ್ಸ್ ನಿ.,
27. ಕರ್ನಾಟಕ ಆಗ್ರೋ ಪ್ರೋಟೀನ್ಸ್ ನಿ.,
28. ಕರ್ನಾಟಕ ಪಲ್ಪ ವುಡ್ ನಿ.,
29. ಕರ್ನಾಟಕ ಇಂಪ್ಲಿಮೆಂಟ್ಸ್ ಅಂಡ್ ಮಿಷನರೀಸ್ ಕಂಪನಿ ನಿ.,

ಇ) ನಷ್ಟ ಹೊಂದಿರುವ ಕಾರ್ಖಾನೆಗಳ ಪುನಶ್ಚೇತನಕ್ಕಾಗಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುತ್ತಿದೆ :–

1. ನಷ್ಟ ಹೊಂದಲಾದ ಕಾರ್ಖಾನೆಗಳಿಗೆ ಬ್ಯಾಂಕುಗಳಿಂದ/ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಸರ್ಕಾರವು ಖಾತರಿಯನ್ನು ಕೊಡಲಾಗಿದೆ.
2. ಮಾರಾಟ ತೆರಿಗೆ ಬಾಕಿ ಪಾವತಿಯನ್ನು ಮುಂದೂಡಲಾಗಿದೆ.
3. ಕಂಪನಿಯ ಸಾಲಗಳನ್ನು ಈಕ್ವಿಟಿಯನ್ನಾಗಿ ಪರಿವರ್ತಿಸಲಾಗಿದೆ.
4. ಸಂಸ್ಥೆಯ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆಯನ್ನು ಅಳವಡಿಸಲು ಅನುಮತಿ ನೀಡಲಾಗಿದೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ನಷ್ಟದಲ್ಲಿರುವ ಕಾರ್ಖಾನೆಗಳಿಗೆ ಹಣವನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ, ಯಾವ್ಯಾವ ಕಾರ್ಖಾನೆಗಳಿಗೆ ಎಷ್ಟೆಷ್ಟು ಹಣವನ್ನು ಒದಗಿಸಲಾಗಿದೆ ಎನ್ನುವುದರ ಬಗ್ಗೆ ನಿಖರವಾದ ಉತ್ತರ ಕೊಟ್ಟಿಲ್ಲ. ಹಾಗೆಯೇ ಮಾರಾಟ ತೆರಿಗೆಯ ಬಾಕಿಯನ್ನು ಮುಂದೂಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಎಷ್ಟೆಷ್ಟು ಮಾರಾಟ ತೆರಿಗೆಯನ್ನು ಮುಂದೂಡಲಾಗಿದೆ ಎನ್ನತಕ್ಕಂಥದ್ದನ್ನು ಹೇಳಿಲ್ಲ. ಮತ್ತೆ ಕಂಪನಿಗಳ ಸಾಲಗಳನ್ನು ಈಕ್ವಿಟಿಯನ್ನಾಗಿ ಪರಿವರ್ತಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಯಾವ್ಯಾವ ಕಂಪನಿಗಳಿಗೆ ಈ ರೀತಿ ಮಾಡಿದ್ದಾರೆ ಎನ್ನತಕ್ಕಂಥ ನಿಖರವಾದ ಉತ್ತರವನ್ನು ಕೊಟ್ಟಿಲ್ಲ. ಹಾಗೆಯೇ ಸಂಸ್ಥೆಯ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆಯನ್ನು ಅಳವಡಿಸಲು ಅನುಮತಿ ನೀಡಲಾಗಿದೆ ಎಂದು ಹೇಳಿದ್ದಾರೆ. ಆದರೆ, ಸ್ವಯಂ ನಿವೃತ್ತಿಯನ್ನು ಎಷ್ಟೆಷ್ಟು ವರ್ಷದಿಂದ ಯಾರ್ಯಾರಿಗೆ ನೀಡುತ್ತಿದ್ದಾರೆ ಎಂಬುವ ಮಾಹಿತಿಯನ್ನು ಕೊಟ್ಟಿಲ್ಲ. ಆದ್ದರಿಂದ ಸಂಪೂರ್ಣವಾದ ಉತ್ತರವನ್ನು ದಯಮಾಡಿ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ವೇಳೆ ಈಗ ಪೂರ್ಣವಾದ ಉತ್ತರವನ್ನು ಒದಗಿಸುವುದಕ್ಕೆ ಆಗದೇ ಇದ್ದರೆ, ಮುಂದಿನ ಸ್ಥಾರಿಯಾದರೂ ಪೂರ್ಣವಾದ ಉತ್ತರವನ್ನು ಕೊಡುತ್ತೇನೆ ಎಂದಾದರೂ ಹೇಳಬೇಕು. ಏಕೆಂದರೆ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಯಾವುದೇ ನಿಖರವಾದ ಉತ್ತರ ಸಿಗದೇ ಇರುವುದರಿಂದ ಈ ಕಾರ್ಖಾನೆಗಳಿಗೆ ಕಷ್ಟವಾಗುತ್ತದೆ. ಹೆಚ್ಚು ಬಂಡವಾಳ ಹಾಕಿರತಕ್ಕಂಥ ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಈ ರೀತಿಯಾದ ಉತ್ತರ ಕೊಡತಕ್ಕಂಥದ್ದು ಸಮಂಜಸವಲ್ಲ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ನಿಖರವಾದ ಉತ್ತರವನ್ನು ಯಾವಾಗ ಕೊಡುತ್ತಾರೆಂದು ಅಥವಾ ಈ ಸದನ ಮುಗಿಯುವದರೊಳಗೆ ಕೊಡುತ್ತಾರೆಯೇ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಸೇರಿ ಒಟ್ಟು ಮೂರು ಸಾರಿ ಸದರಿ ಪ್ರಶ್ನೆಯನ್ನು ಮುಂದೂಡಲಾಗಿದೆ. ಆದ್ದರಿಂದ, ಈಗಲಾದರೂ ಸ್ಪಷ್ಟವಾದ ನಿಖರವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಸಂಬಂಧಪಟ್ಟಂತೆ ನಾವು ಉತ್ತರವನ್ನು ಒದಗಿಸಿಕೊಟ್ಟಿದ್ದೇವೆ. ಆದರೆ, ಯಾವ್ಯಾವ ಕೈಗಾರಿಕೆಗೆ

ಸರ್ಕಾರ ಎಷ್ಟು ಸಾಲಕೊಟ್ಟಿದೆ ಎನ್ನತಕ್ಕಂಥದ್ದನ್ನು ಮತ್ತು ಎಷ್ಟು ಈಕ್ವಿಟಿ ಕೊಟ್ಟಿದೆ ಎಂಬುದನ್ನು ಹಾಗೂ ಎಷ್ಟು ಗ್ಯಾರಂಟಿ ಕೊಟ್ಟಿದೆ ಎನ್ನತಕ್ಕಂಥ ಮಾಹಿತಿ ಬೇಕಾದರೆ ನಾನು ಖಂಡಿತ ಒದಗಿಸಿಕೊಡುತ್ತೇನೆ. ಎಲ್ಲಾ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಈ ಎಲ್ಲಾ ಮಾಹಿತಿ ಬೇಕಾದರೆ ಕಳುಹಿಸಿಕೊಡುತ್ತೇನೆ. ಅಥವಾ ಪರ್ಟಿಕ್ಯುಲರ್ ಆಗಿ ಅವರು ಯಾವುದು ಕೇಳುತ್ತಾರೆಯೋ ಅದಕ್ಕೆ ಸಂಬಂಧಪಟ್ಟಂಥ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆಯನ್ನು ಮಾನ್ಯ ನಾರಾಯಣಸ್ವಾಮಿವರು ಕೇಳಿ. ಮಾನ್ಯ ಸದಸ್ಯರು ಬಂದಿಲ್ಲ.

ಅರಣ್ಯ ಭೂಮಿಯಲ್ಲಿ ಗಣಿಗಾರಿಕೆಯ ಗುತ್ತಿಗೆ

398 (3436) : ಶ್ರೀ ಶಿವಶಂಕರ ರೆಡ್ಡಿ ಎ.ಹೆಚ್. (ಗೌರಿಬಿದನೂರು) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಅರಣ್ಯ ಭೂಮಿಯಲ್ಲಿ ಗಣಿ ಗುತ್ತಿಗೆ ಸರ್ಕಾರ ನೀಡಿದಂತೆ ಅರಣ್ಯ ಇಲಾಖೆ ಅನುಮೋದನೆಯನ್ನು ನೀಡಲು ಹೆಚ್ಚು ಖರ್ಚು ಮತ್ತು ವಿಳಂಬ ಹಾಗೂ ಕಷ್ಟಕರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ವಿಳಂಬದಿಂದ ಗುತ್ತಿಗೆದಾರರಿಗೆ ತೊಂದರೆ ಮತ್ತು ಗಣಿಗಾರಿಕೆಯ ಅಭಿವೃದ್ಧಿಗೆ ಅಡಚಣೆಗಳು ಆಗುವುದರ ಬಗ್ಗೆ ಸರ್ಕಾರದ ಕ್ರಮವೇನು;

(ಇ) ಗುತ್ತಿಗೆಗೆ ಅರ್ಜಿ ಸಲ್ಲಿಸಿ ವರ್ಷಗಳಾದರೂ ಗುತ್ತಿಗೆ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಈ ವಿಳಂಬ ನೀತಿಯಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ಆದಾಯ ಕುಂಠಿತವಾಗಿಲ್ಲವೇ; ಇದಕ್ಕೆ ಸರ್ಕಾರದ ಕ್ರಮವೇನು;

(ಉ) ಇತ್ತೀಚೆಗೆ ರಾಜ್ಯಾದ್ಯಂತ ಗಣಿ ಗುತ್ತಿಗೆ ಜೆಟ್ ನೋಟಿಫಿಕೇಷನ್ ಮಾಡಿದ್ದು ನೂರಾರು ಅರ್ಜಿಗಳು ಬಂದಿದ್ದು, ಯಾವಾಗ ಇತ್ಯರ್ಥಪಡಿಸಲಾಗುತ್ತದೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

(ಅ) ಬಂದಿದೆ.

(ಆ) ಅಂತಹ ಅಡಚಣೆ ತಪ್ಪಿಸಲು ಗಣಿ ಗುತ್ತಿಗೆ ನೀಡುವ ಮೊದಲು ಅರಣ್ಯ, ಪರಿಸರ ಇಲಾಖೆಗಳ ಸಹಮತಿ ಪಡೆಯಲಾಗುತ್ತದೆ.

(ಇ) ಬಂದಿದೆ.

(ಈ) ಹೌದು; ಗಣಿ ಗುತ್ತಿಗೆ ನೀಡುವ ಮೊದಲು ಕಂದಾಯ ಇಲಾಖೆ, ಅರಣ್ಯ ಇಲಾಖೆ, ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ಮತ್ತು ಪರಿಸರ ಇಲಾಖೆಗಳ ಅನುಮತಿಗಳನ್ನು ಪಡೆಯಬೇಕಾಗಿದೆ. ಆ ಸಂಬಂಧ ವಿಳಂಬ ತಪ್ಪಿಸುವ ಉದ್ದೇಶದಿಂದ ಇಲಾಖೆಗಳು ಸಹಮತಿ ನೀಡುವ ಕುರಿತಂತೆ ಕಾಲಮಿತಿ ನಿಗದಿಪಡಿಸಲಾಗಿದೆ.

(ಉ) ಈ ಜೆಟ್ ನೋಟಿಫಿಕೇಷನ್ ಕುರಿತಂತೆ ಬಹಳಷ್ಟು ಅರ್ಜಿಗಳು ಬಂದಿದ್ದು, ಅವುಗಳನ್ನು ಎಂ.ಎಂ.ಡಿ.ಆರ್. ಕಾಯ್ದೆ, 1957 ಮತ್ತು ಎಂ.ಸಿ.ಆರ್., 1960ರ ನಿಯಮದ ಪ್ರಕಾರ ಪರಿಶೀಲಿಸಿ ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಇತ್ಯರ್ಥ ಪಡಿಸಲಾಗುವುದು.